**ಸಾಕ್ಷಿಯನ್ನು ದಿಃ10.11.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ಪ್ರತಿವಾದಿ ಜಯಣ್ಣ ನನ್ನ ಸ್ವಂತ ಅಣ್ಣ ಎಂದರೆ ಸರಿ. ಈ ಪ್ರಕರಣ ದಾಖಲು ಮಾಡುವ ಪೂರ್ವದಲ್ಲಿ ನಿಮ್ಮ ಒಟ್ಟು ಕುಟುಂಬದ ಆಸ್ತಿಗಳನ್ನು ನಿಮ್ಮ ಸಹೋದರರು ಸೇರಿ ವಿಭಾಗಪತ್ರದ ಮೂಲಕ ಹಂಚಿಕೊಂಡಿದ್ದೀರಾ ಎಂದರೆ ಸರಿ, 2019 ರಲ್ಲಿ ವಿಭಾಗ ಆಗಿದೆ ಎಂದು ನುಡಿಯುತ್ತಾರೆ.

2. ವಿಭಾಗ ಪತ್ರದಂತೆ ನಿಮ್ಮ ನಿಮ್ಮ ಜಮೀನುಗಳಲ್ಲಿ ನೀವೇ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬರುತ್ತಿದ್ದೀರಾ ಎಂದರೆ ಸರಿಯಲ್ಲ.

3. ಸದರಿ ವಿಭಾಗದಂತೆ ಪ್ರತಿವಾದಿ ದಾವಾ ಜಮೀನನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ.

4. ಪ್ರತಿವಾದಿ ಆರ್ಥಿಕವಾಗಿ ಚೆನ್ನಾಗಿದ್ದಾರೆ ಎಂದರೆ ಸರಿಯಲ್ಲ. ನೀವು ಆರ್ಥಿಕವಾಗಿ ಪ್ರತಿವಾದಿಗಿಂತ ಕಡಿಮೆ ಇದ್ದೀರಾ ಎಂದರೆ ಸರಿಯಲ್ಲ.

5. ದಿಃ 01.02.2021 ರಲ್ಲಿ ಪ್ರತಿವಾದಿಗೆ ನೀಡಿದ ಹಣ ನಮ್ಮ ಜಮೀನು ಹಾಗೂ ಬೇರೆ ಬೇರೆ ಜಮೀನಿನಲ್ಲಿ ತಂಬಾಕು ಹಾಗೂ ಶುಂಠಿ ವ್ಯವಸಾಯ ಮಾಡಿದ್ದರಿಂದ ಬಂದ ಹಣವಾಗಿತ್ತು.

6. ತಂಬಾಕನ್ನು ಹರಾಜು ಮಾರುಕಟ್ಟೆಯಲ್ಲಿಯೇ ಮಾರಬೇಕು ಎಂದರೆ ಸರಿ. ಶುಂಠಿ ಹಾಗೂ ತಂಬಾಕು ಮಾರಿದ ಬಗ್ಗೆ ದಾಖಲೆ ಇವೆ. ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

7. ನಾನು ಆ ವರ್ಷದಲ್ಲಿ 800 ರಿಂದ 900 ಕೆಜಿ ತಂಬಾಕು ಬೆಳೆದಿದ್ದೆ. ನಮಗೆ ಸ್ವಂತ ತಂಬಾಕು ಪರವಾನಿಗೆ ಇದೆ.

8. ನನ್ನ ಹೆಸರಿನಲ್ಲಿ 23 ಗುಂಟೆ ಜಮೀನು ಇದೆ. ಸದರಿ 23 ಗುಂಟೆಯಲ್ಲಿ 800-900 ಕೆ.ಜಿ ತಂಬಾಕು ಬೆಳೆಯಲು ಸಾಧ್ಯವಿಲ್ಲ ಎಂದರೆ, ತಮ್ಮೇಗೌಡ ಬಿನ್ ತಿರುಮಲೇಗೌಡರ ಒಂದೂವರೆ ಎಕರೆ ಜಮೀನು ಸಹ ಮಾಡಿದ್ದೆ ಎಂದು ನುಡಿಯುತ್ತಾರೆ. ಅದರ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಆ ಬಗ್ಗೆ ಅವರಿಂದ ಸಾಕ್ಷಿ ಹೇಳಿಸಲು ತೊಂದರೆ ಇಲ್ಲ.

9. ನೀವು ಆ ರೀತಿ ಯಾವುದೇ ಬೇರೆ ಜಮೀನು ಮಾಡಿಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ತಮ್ಮೇಗೌಡ ಬಿನ್ ತಿರುಮಲೇಗೌಡರಿಗೆ ನೀವು ಹೇಳುವಂತೆ ಜಮೀನು ಇಲ್ಲ ಎಂದರೆ ಸರಿಯಲ್ಲ.

10. ಪಹಣಿಯಲ್ಲಿ ಬೇಳೆಯುವ ಬೆಳೆಗಳ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ಆ ಬಗ್ಗೆ ಪಹಣಿ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ, ಅವರು ಪಹಣಿ ಕೊಡುವುದಿಲ್ಲ ಎಂದು ನುಡಿಯುತ್ತಾರೆ.

11. ನಿಮ್ಮ ಬಳಿ ದಿಃ 01.02.2021 ರಲ್ಲಿ 1 ಲಕ್ಷ 80 ಸಾವಿರ ಹಣ ಇತ್ತು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ, ಹೊಗೆಸೊಪ್ಪನ್ನು ಚಿಟ್ಟೇನಹಳ್ಳಿ ಸೊಸೈಟಿ ಖಾತೆಯ ಮುಖಾಂತರ ಮಾರಿದ್ದೆ. ಸದರಿ ಖಾತೆಯಲ್ಲಿ 1 ಲಕ್ಷ 80 ಸಾವಿರ ಇದ್ದ ಬಗ್ಗೆ ಹಾಗೂ ಡ್ರಾ ಮಾಡಿದ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ, ಕೊಟ್ಟರೆ ತಂದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

12. ನೀವು ನಿಮ್ಮ ಹಾತೆಯಿಂದ ದಿಃ 01.02.2021 ರಲ್ಲಿ 1 ಲಕ್ಷ 80 ಸಾವಿರ ಹಣ ಪಡೆದೇ ಇಲ್ಲ ಎಂದರೆ ಸರಿಯಲ್ಲ. ಸದರಿ ಸೊಸೈಟಿಯಲ್ಲಿ ನಿಮ್ಮ ಖಾತೆ ಇಲ್ಲ ಎಂದರೆ ಸರಿಯಲ್ಲ.

13. ನೀವು ಶುಂಠಿ ಹಾಗೂ ತಂಬಾಕು ಬೆಳೆಯಲು ಜಮೀನು ಇಲ್ಲ ಎಂದರೆ ಸರಿಯಲ್ಲ. ಬೇರೆ ಜಮೀನು ಮೂಲಕ ಬೆಳೆಯುತ್ತಿದ್ದೇನೆ.

14. ಸರ್ಕಾರದಿಂದ ನನಗೆ ಬಿ.ಪಿ.ಎಲ್ ಕಾರ್ಡ್ ನೀಡಿದ್ದಾರೆ ಎಂದರೆ ಸರಿ. ಬಿ.ಪಿ.ಎಲ್ ಕಾರ್ಡನ್ನು ಕಡುಬಡವರಿಗೆ ಮಾತ್ರ ನೀಡುತ್ತಾರೆ ಎಂದರೆ ಸರಿ.

15. ನೀವು ಪ್ರತಿವಾದಿಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ.

16. ನಿಮಗೆ 1 ಲಕ್ಷ 80 ಸಾವಿರ ಹಣ ನೀಡುವ ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನಿಮ್ಮ ಬಳಿ ಸದರಿ ಹಣ ಇದ್ದ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುತ್ತೇನೆ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಓ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ